**ದಿನಾಂಕಃ11.02.2026 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ಪಿ., ವಕೀಲರಿಂದಃ**

ನಾನು ಎಲ್ಲಾ ವಾದಿಗಳ ವಾರಸುದಾರರ ಪರವಾಗಿ ಸಾಕ್ಷ್ಯ ನುಡಿದಿದ್ದೇನೆ. ವಾದ ಪತ್ರದಲ್ಲಿರುವ ಮಾಹಿತಿಗಳನ್ನೆಲ್ಲಾ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ತಕರಾರನ್ನು ನಾನು ಓದಿ ತಿಳಿದುಕೊಂಡಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರ ನೀಡವ ಮೊದಲು ಪ್ರತಿವಾದಿಗಳ ತಕರಾರನ್ನು ಓದಿ ತಿಳಿದುಕೊಂಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಅಂಶಗಳ ಬಗ್ಗೆ ಉಲ್ಲೇಖಿಸಿಲ್ಲ.

ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ನವರನ್ನು ನಾನು ನೋಡಿಲ್ಲ. ಅವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ಹೊಸಹಳ್ಳಿ ಗ್ರಾಮ, ಯಲ್ದೂರು ಹೋಬಳಿಯ ಕಾಯಂ ವಾಸಿಗಳು ಎಂದು ನನಗೆ ಗೊತ್ತಿಲ್ಲ.

ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ರವರಿಗೆ 4 ಜನ ಮಕ್ಕಳು. ಅವರುಗಳು ಪಾಪಣ್ಣ, ನಾರಾಯಣಪ್ಪ , ವೆಂಕಟಪ್ಪ , ಸುಬ್ಬಣ್ಣ ಎಂದರೆ ಸರಿ. ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ಕೃಷಿ ಮಾಡುತ್ತಿದ್ದರು ಎಂದರೆ ಸರಿ. ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ಹೊಂದಿದ್ದ ಆಸ್ತಿಗಳು ಅವರ 4 ಜನ ಮಕ್ಕಳಿಗೆ ಬಂದಿತ್ತು ಎಂದರೆ ಸರಿ. ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ರವರಿಗೆ ಒಟ್ಟು ಎಷ್ಟು ಆಸ್ತಿಗಳು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಮುನಿಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ರವರಿಗೆ ಹೊಸಹಳ್ಳಿ ಗ್ರಾಮ ಸರ್ವೇ ನಂಬರ್ 51/4 ರಲ್ಲಿ 1 ಎಕರೆ 35 ½ ಗುಂಟೆ, ಸರ್ವೇ ನಂಬರ್ 11/11 ರಲ್ಲಿ 24½ ಗುಂಟೆ ಆಸ್ತಿ ಮತ್ತು ದಾವಾ ಆಸ್ತಿಯು ಇತ್ತು ಎಂದರೆ ಸರಿಯಲ್ಲ, ಕೇವಲ ದಾವಾ ಆಸ್ತಿ ಮಾತ್ರ ಇತ್ತು. ಸರ್ವೇ ನಂಬರ್ 11/11 ಸುಬ್ಬಣ್ಣ ರವರಿಗೆ ಬಂದಿದ್ದು ಅವರಿಗೆ ಅವರ ತಂದೆ ಮುನಿಸ್ವಾಮಿ ರವರಿಂದ ಬಂದಿದೆ.

ಸುಬ್ಬಣ್ಣ ಆತನ ಹೆಂಡತಿ ನಾರಾಯಣಮ್ಮ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದ ಎಂದರೆ ಸರಿ. ಅವರುಗಳು ಮುನಿವೆಂಕಟಮ್ಮ, ನಾರೆಮ್ಮ ಮತ್ತು ಹೆಚ್ ಎಸ್ ಮುನೆಪ್ಪ ಎಂದರೆ ಸರಿ.

ಪಾಪಣ್ಣ ನ ಹೆಂಡತಿ ಚಿಕ್ಕಮುನಿಯಮ್ಮ ಎಂದರೆ ಸರಿ. ಅವರಿಗೆ ಒಬ್ಬ ಮುನಿವೆಂಕಟಮ್ಮ ಎಂಬ ಹೆಸರಿನ ಮಗಳಿದ್ದಳು ಎಂದರೆ ಸರಿ.

ನಾರಾಯಣಪ್ಪ ಮತ್ತು ಆತನ ಹೆಂಡತಿ ಮುನಿಯಮ್ಮ ರವರಿಗೆ ಯಾವುದೇ ಮಕ್ಕಳಿರಲಿಲ್ಲ ಎಂದರೆ ಸರಿ. ನಾರಾಯಣಪ್ಪ ಮರಣ ಹೊಂದಿದ್ದ ನಂತರ ಪಾಪಣ್ಣ, ಸುಬ್ಬಣ್ಣ ಮತ್ತು ವೆಂಕಟಪ್ಪ ರವರು ಮುನಿಸ್ವಾಮಿ ರವರ ಆಸ್ತಿಗಳನ್ನು ತಮ್ಮಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಆ ವಿಭಾಗದ ಪ್ರಕಾರ ಅವರವರು ತಮಗೆ ಬಂದಂತಹ ಪಾಲಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

ಸರ್ವೇ ನಂಬರ್ 11/11 ಮತ್ತು ಸರ್ವೇ ನಂಬರ್ 51/4 ಆಸ್ತಿಗಳು ಪಾಪಣ್ಣ ಮತ್ತು ಸುಬ್ಬಣ್ಣ ರವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ, ಕೇವಲ ಸುಬ್ಬಣ್ಣ ರವರ ಹೆಸರಿಗೆ ಬಂದಿತ್ತು. ದಾವಾ ಆಸ್ತಿಯು ವೆಂಕಟಪ್ಪ ರವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಸದರಿ ವೆಂಕಟಪ್ಪನ ಮಗಳು ಎಂದರೆ ಸರಿ. 2 ನೇ ಪ್ರತಿವಾದಿ ಸುಬ್ಬಣ್ಣನ ಮಗ ಮತ್ತು 3 ನೇ ಪ್ರತಿವಾದಿ ಸುಬ್ಬಣ್ಣನ ಮೊಮ್ಮಗಳು.

ಸರ್ವೇ ನಂಬರ್ 51/4 ಪ್ರಸ್ತುತದಲ್ಲಿ ಹೆಚ್ ಎಸ್ ಮುನೆಪ್ಪ ಮತ್ತು ವಿ ಶ್ರೀನಿವಾಸ ರವರ ಹೆಸರಿನಲ್ಲಿ ಬರುತ್ತಿದ್ದು , ನನ್ನ ಹೆಸರಿಗೆ 1 ಎಕರೆ 35 ½ ಗುಂಟೆ ಇದೆ ಎಂದರೆ ಸರಿ. ಈಗ ನೋಡುತ್ತಿರುವ ಹಾಗೂ ಈಗ ಗುರುತಿಸಿದ ನಿಡಿ.1 ಸದರಿ ಪಹಣಿ ಎಂದರೆ ಸರಿ.

ಸರ್ವೇ ನಂಬರ್ 11/11 ಪ್ರಸ್ತುತದಲ್ಲಿ ಹೆಚ್ ಎಸ್ ಮುನೆಪ್ಪ ಮತ್ತು ನನ್ನ ತಂದೆ ವೆಂಕಟರಾಮಪ್ಪ ರವರ ಹೆಸರಿನಲ್ಲಿ ಬರುತ್ತಿದ್ದು , ಹೆಚ್ ಎಸ್ ಮುನಿಪ್ಪ ರವರ ಹೆಸರಿಗೆ 1½

ಗುಂಟೆ ಇದೆ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ 1 ½ ಗುಂಟೆ ಇದೆ ಎಂದರೆ ಸರಿ. ಈಗ ನೋಡುತ್ತಿರುವ ಹಾಗೂ ಈಗ ಗುರುತಿಸಿದ ನಿಡಿ.2 ಸದರಿ ಪಹಣಿ ಎಂದರೆ ಸರಿ. ನಿಡಿ.1 ಮತ್ತು 2 ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು ವಾಸವಿರುವ ಮನೆಯು ಸಹಾ ಮುನಿಸ್ವಾಮಿ ರವರಿಂದ ಬಂದಂತಹ ಮನೆ ಆಸ್ತಿ ಎಂದರೆ ಸರಿ. ಆ ಮನೆ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯು 4 ನೆ ಪ್ರತಿವಾದಿಗೆ ಮಾರಾಟವಾಗಿದ್ದ ಕಾರಣ ಕೇವಲ ಅದರ ಬಗ್ಗೆ ದಾವೆ ಹೂಡಿದ್ದೇನೆ ಎಂದರೆ ಸರಿ. ಬೇರೆ ಆಸ್ತಿಗಳಲ್ಲಿ ನಮ್ಮ ಕುಟುಂಬದಲ್ಲಿ ಯಾವುದೇ ಸಮಸ್ಯೆ ಇಲ್ಲದಿದ್ದ ಕಾರಣ ಅವರನ್ನು ಸೇರಿಸಿಲ್ಲ. ವಿಭಾಗವಾಗಿದ್ದ ಕಾರಣದಿಂದಲೇ ನನ್ನ ಹಾಗೂ ನನ್ನ ತಂದೆಯ ಹೆಸರಿಗೆ ಮತ್ತು ಮುನೆಪ್ಪ ರವರ ಹೆಸರಿಗೆ ಖಾತೆಗಳಾಗಿವೆ ಎಂದರೆ ಸರಿ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ಕುಟುಂಬದವರು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಿನದಿಂದ 4 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಹಾೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಅಥವಾ ಬೇರೆ ವಾದಿಗಳಳಿಗೆ ಯಾವುದೆ ಹಕ್ಕು ಅಧಿಕಾರವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.